ಸಿ.ಸಿ .ನಂ. 191/2022                                                    ಪಿಡಬ್ಲೂಃ 1

ದಿನಾಂಕಃ 06-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಪಿ ಎಸ್ ಎನ್ ವಕೀಲರಿಂದಃ**

13. ನಿಪಿ-7 ಮತ್ತು ನಿಪಿ-14 ಎರಡು ಬೇರೆ ಬೇರೆ ದಾಖಲಾತಿಗಳು . ಎರಡು ದಾಖಲಾತಿಗಳು ಬೇರೆ ಬೇರೆ ಎಂದು ಮೂಲ ದಾಖಲಾತಿಗಳನ್ನು ತಂದು ಪುರಾವೆ ಮಾಡಲು ನಾವು ಬದ್ಧರಿದ್ದೇವೆ ಎಂದರೆ ಸರಿ . ಆ ಎರಡು ದಾಖಲಾತಿಗಳು ಎಂದರೆ ಸಾಕ್ಷಿ ಸಂಘದ ಗುಂಪು ರಚನೆ ಮಾಡುವಾಗ ಒಂದು ಅರ್ಜಿ ಕೊಟ್ಟಿರುತ್ತಾರೆ ಹಾಗೂ ಸಾಲ ಮಂಜೂರು ಮಾಡುವಾಗ ಇನ್ನೊಂದು ಅರ್ಜಿಯನ್ನು ಕೊಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ . ಎರಡು ಅರ್ಜಿಗಳನ್ನು ನಮ್ಮ ಬ್ಯಾಂಕಿನಲ್ಲಿ ಬರೆದುಕೊಟ್ಟಿರಬಹುದು . ಆ ಎರಡು ದಾಖಲಾತಿಗಳನ್ನು ಯಾವ ಯಾವ ದಿನಾಂಕಗಳಂದು ಬರೆದುಕೊಟ್ಟಿದ್ದಾರೆ ನೆನಪಿಲ್ಲ . ಗುಂಪು ರಚನೆಯಾಗುವ ಪೂರ್ವದಲ್ಲಿ ಒಂದು ಸಾಲದ ಅರ್ಜಿಯನ್ನು ಕೊಟ್ಟಿರುತ್ತಾರೆ . ಐದು ಜನರ ಸಂಘ . ಸಂಘ ರಚನೆಯಾಗುವ ಪೂರ್ವದಲ್ಲಿ ಹಾಗೂ ರಚನೆಯಾದ ನಂತರ ಎರಡು ಅರ್ಜಿಗಳನ್ನು ಕೊಟ್ಟಿದ್ದಾರೆ . ಆ ಎರಡು ದಾಖಲಾತಿಗಳನ್ನು ಎಲ್ಲಿ ಬೇಕಾದರೂ ಬರೆದುಕೊಡಬಹುದು . ಆ ಎರಡು ದಾಖಲಾತಿಗಳು ನಮ್ಮ ಬ್ಯಾಂಕಿನ ಫಾರ್ಮೆಟ್ ಗಳಾಗಿರುತ್ತವೆ . ಆ ಎರಡು ದಾಖಲಾತಿಗಳ ಮೂಲ ದಾಖಲಾತಿಗಳು ನಮ್ಮ ಶಾಖೆಯಲ್ಲಿ ಇವೆ .

14. ಒಬ್ಬೊಬ್ಬ ಸದಸ್ಯರಿಗೆ ತಲಾ ರೂಪಾಯಿ 75,000/- ಸಾಲವನ್ನು ಕೊಟ್ಟಿದ್ದೇವೆ . ಒಟ್ಟೂ 2,50,000/- ರೂಪಾಯಿ ಸಂದಾಯ ಮಾಡಿರುತ್ತೇವೆ . ಅಷ್ಟು ಹಣ ಸಂದಾಯ ಮಾಡಿದ ಬಗ್ಗೆ ನಮ್ಮ ಲೋನ್ ಸ್ಟೇಟ್ ಮೆಂಟ್ ನಲ್ಲಿ ನಮೂದು ಇದೆ . ನಾವು ಒಟ್ಟೂ ಐದು ಜನರಿಗೆ ಸಾಲವನ್ನು ಕೊಟ್ಟಿದ್ದೇವೆ . ಅವರ ಹೆಸರು ಶಿಲ್ಪಾ ತಾಂಡೇಲ , ಪವಿತ್ರಾ ತಾಂಡೇಲ, ಉಮಾ ಕುಮಟಾಕರ , ಸುಮಿತ್ರಾ ತಾಂಡೇಲ ಮತ್ತು ಲಕ್ಷ್ಮೀ ತಾಂಡೇಲ. ಒಂದು ಸಂಘಕ್ಕೆ ಸಾಲವನ್ನು ಪಡೆಯುವ ಸಂದರ್ಭದಲ್ಲಿ ಆ ಸಂಘದ ಸೇವಿಂಗ್

ಅಕೌಂಟ್ ನಮ್ಮ ಬ್ಯಾಂಕಿನಲ್ಲಿರುತ್ತದೆ ಎಂದರೆ ಸರಿ . ಸಾಲ ಮಂಜೂರಾದ ನಂತರ ಅವರ ಸೇವಿಂಗ್ ಅಕೌಂಟಗೆ ಸಾಲದ ಹಣವನ್ನು ವರ್ಗಾಯಿಸಬೇಕಾಗುತ್ತದೆ ಎಂದರೆ ಸರಿ . ಈ ಪ್ರಕರಣದ ಸಂಘದ ಸೇವಿಂಗ್ ಅಕೌಂಟ್ ನಂಬರ ನೆನಪಿಲ್ಲ. ಈ ಸಂಘದ ಸೇವಿಂಗ್ ಅಕೌಂಟಗೆ ಸಾಲದ ಹಣವನ್ನು ಸಂದಾಯ ಮಾಡಿದ ಬಗ್ಗೆ ನಾವು ಯಾುವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿ ದಾಖಲಾತಿ ನೋಡಿ ಹೇಳಬೇಕು ಎಂದು ನುಡಿದಿರುತ್ತಾರೆ . ವೈಯಕ್ತಿಕ ಖಾತೆಗೆ ಸಾಲವನ್ನು ಪಡೆದಾಗ ಅವರ ಉಳಿತಾಯ ಖಾತೆಗೆ ಸಾಲದ ಹಣವನ್ನು ಸಂದಾಯ ಮಾಡುತ್ತೇವೆ ಎಂದರೆ ಸರಿ . ಸಾಲ ಮಂಜೂರಾದ ನಂತರ ನಾವು ಕೆಡಿಸಿಸಿ ಬ್ಯಾಂಕ್ ಮೂಲಕ ಹಣ ಸಂದಾಯ ಮಾಡುತ್ತೇವೆ ಎಂದರೆ ಸರಿ . ನಮ್ಮ ಬ್ಯಾಂಕಿನಲ್ಲಿ ಯಾವುದೇ ಹಣ ಸಂದಾಯ ಮಾಡಿದಾಗ ಅದು ಕೆಡಿಸಿಸಿ ಬ್ಯಾಂಕಿನ ನಮ್ಮ ಪಾಸ್ ಬುಕ್ ನಲ್ಲಿ ನಮೂದು ಇರುತ್ತದೆ ಎಂದರೆ ಸರಿ . ಕೆಡಿಸಿಸಿ ಬ್ಯಾಂಕ್ ಅಕೌಂಟನ ಮೂಲಕ ಇವರ ಸಂಘದ ಖಾತೆಗೆ ಹಣ ಸಂದಾಯವಾದ ಬಗ್ಗೆ ಯಾವುದೇ ದಾಖಲಾತಿಯನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.

15. ನಮ್ಮ ಬ್ಯಾಂಕಿನವರು ಇಂತಹ ಹಲವಾರು ಸಂಘಗಳಿಗೆ ಸಾಲವನ್ನು ಕೊಟ್ಟಿದ್ದಾರೆ ಎಂದರೆ ಸರಿ . ವೈಯಿಕ್ತಿಕವಾಗಿಯೂ ಕೂಡ ಹಲವಾರು ಜನರಿಗೆ ಸಾಲವನ್ನು ನೀಡಿದ್ದಾರೆ ಎಂದರೆ ಸರಿ . ಕೆಲವು ಸಂಘಗಳಿಗೆ ಒಂದೇ ಹೆಸರಿನ ಹಲವು ವ್ಯಕ್ತಿಗಳು ಇದ್ದಾರೆ ಎಂದರೆ ಇದ್ದಿರಬಹುದು. ಕೆಡಿಸಿಸಿ ಬ್ಯಾಂಕ ಮೂಲಕ ನಾವು ಯಾವ ದಿನ ಹಣ ಟ್ರಾನ್ಸಫರ್ ಮಾಡಿದ್ದೇವೆ ಅದೇ ದಿನಾಂಕ ಸೇವಿಂಗ್ಸ ಖಾತೆ ಹಾಗೂ ಸಾಲದ ಖಾತೆಗೆ ನಮೂದಾಗಬೇಕಾಗುತ್ತದೆ ಎಂದರೆ ಸರಿಯಲ್ಲ . ಲೋನ್ ಸೆಂಕ್ಷನ್ ಆದ ನಂತರ ಅವರ ಉಳಿತಾಯ ಖಾತೆಗೆ ಹಾಕಿರುತ್ತೇವೆ . ಉಳಿತಾಯ ಖಾತೆಯಿಂದ ಅವರು ಕೇಳಿದಾಗ ಕೆಡಿಸಿಸಿ ಬ್ಯಾಂಕ ಮುಖಾಂತರ ಅವರ ಪರ್ಸನಲ್ ಅಕೌಂಟಿಗೆ ಹಾಕುತ್ತೇವೆ . ಉಳಿತಾಯ ಖಾತೆ ಎಂದರೆ ಅವರ ಪರ್ಸನಲ್ ಅಕೌಂಟ್ ಎಂದರೆ ಸರಿ . ಲೋನ್ ಸೆಂಕ್ಷನ್ ಆದ ನಂತರ ನಮ್ಮ ಬ್ಯಾಂಕಿನಲ್ಲಿರುವ ಉಳಿತಾಯ ಖಾತೆಗೆ ಹಾಕಿರುತ್ತೇವೆ . ಅವರಿಗೆ ಯಾವಾಗ ಬೇಕು ಆವಾಗ ನಾವು ಅವರ ಉಳಿತಾಯ ಖಾತೆಗೆ ಹಣ ಟ್ರಾನ್ಸಫರ್

ಮಾಡುತ್ತೇವೆ . ಅವರ ಯಾವ ಉಳಿತಾಯ ಖಾತೆ ಇರುವ ಬ್ಯಾಂಕಿಗೆ ಹಣ ಸಂದಾಯ ಮಾಡುತ್ತೇವೆ ನೆನಪಿಲ್ಲ. ಅವರ ಉಳಿತಾಯ ಖಾತೆಯಿಂದ ನಮ್ಮ ಕೆಡಿಸಿಸಿ ಬ್ಯಾಂಕಿಗೆ ಯಾವಾಗ ಟ್ರಾನ್ಸಫರ್ ಆಗಿದೆ ನೆನಪಿಲ್ಲ. ಅವರ ಉಳಿತಾಯ ಖಾತೆಯಿಂದ ನಮ್ಮ ಕೆಡಿಸಿಸಿ ಬ್ಯಾಂಕಿಗೆ 2 ಲಕ್ಷ ರೂಪಾಯಿ ಟ್ರಾನ್ಸಫರ್ ಮಾಡಿಕೊಂಡಿದ್ದೇವೆ . ನಿಪಿ-18 ಅವರ ಉಳಿತಾಯ ಖಾತೆಯಿಂದ ಕೆಡಿಸಿಸಿ ಬ್ಯಾಂಕ್ ಗೆ ಜಮಾ ಆಗಿರುವ ದಾಖಲಾತಿ. ನಮ್ಮಿಂದ ಆರೋಪಿಗೆ ಹಣವನ್ನು ಕೊಟ್ಟಿದ್ದೇವೆ ಎಂದು ಹೇಳುವಂತಹ ಯಾವುದೇ ದಾಖಲಾತಿಯನ್ನು ನಾವು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ . ಈ ಪ್ರಕರಣದಲ್ಲಿ ಯಾವುದೇ ಸಾಲ ಮಂಜೂರಾಗದ ಕಾರಣ ಹಾಗೂ ಸಾಲದ ಹಣ ನೀಡದ ಕಾರಣ ಯಾವುದೇ ದಾಖಲಾತಿ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನಾವು ಅವರ ಉಳಿತಾಯ ಖಾತೆಗೆ ಹಣ ಸಂದಾಯ ಮಾಡಿದ ಬಗ್ಗೆ ಹಾಗೂ ಅವರ ಉಳಿತಾಯ ಖಾತೆಯಿಂದ ಕೆಡಿಸಿಸಿ ಬ್ಯಾಂಕಿಗೆ ಸಂದಾಯ ವಾದ ಬಗ್ಗೆ ಎಲ್ಲಾ ದಾಖಲಾತಿಗಳು ನಮ್ಮ ಬ್ಯಾಂಕಿನಲ್ಲಿರುತ್ತದೆ ಎಂದರೆ ಸರಿ . ಈ ಪ್ರಕರಣದಲ್ಲಿ ಹೇಳಿರುವ ಯಾವುದೇ ಸಂಘದ ಅಥವಾ ಸದಸ್ಯರ ಉಳಿತಾಯ ಖಾತೆ ನಮ್ಮ ಬ್ಯಾಂಕಿನಲ್ಲಿ ಇಲ್ಲ ಎಂದರೆ ಸರಿಯಲ್ಲ.

16. ಸಾಕ್ಷಿಗೆ ಒಂದು ಸ್ವಸಹಾಯ ಸಂಘದ ಸಾಲ ಕೋರಿದ ಅರ್ಜಿಯನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ -1 ಎಂದು ಗುರುತಿಸಲಾಯಿತು . ಇಂತಹ ಸಾಲದ ಅರ್ಜಿಯಲ್ಲಿ ಸ್ಪಷ್ಟವಾಗಿ ಸಂಘದ ಹೆಸರು , ಬೇಕಾದ ಸಾಲದ ಮೊತ್ತ ಸ್ಪಷ್ಟವಾಗಿ ಅಕ್ಷರದಲ್ಲಿ ಹಾಗೂ ಸಂಖ್ಯೆಯಲ್ಲಿ ನಮೂದಾಗಿರಬೇಕು ಎಂದರೆ ಸರಿ . ಎಷ್ಟು ಮೊತ್ತದ ಸಾಲ ಎಂದು ಸ್ಪಷ್ಟವಾಗಿ ಬರೆಯದಿದ್ದರೆ ಊಹೆಯ ಮೇಲೆ ಸಾಲವನ್ನು ಕೊಡಲು ಆಗುವುದಿಲ್ಲ ಎಂದರೆ ಸಾಕ್ಷಿ ಮಾತಿನ ಮೂಲಕ ಹೇಳಿರಬಹುದು ಎಂದು ನುಡಿದಿರುತ್ತಾರೆ . ಸಾಲದ ಅರ್ಜಿ ಸ್ಪಷ್ಟವಾಗಿರಬೇಕು ಹಾಗೂ ದಾಖಲಾತಿಗಳು ನಿಖರವಾಗಿ ಪಾರದರ್ಶಕವಾಗಿರಬೇಕು ಎಂದರೆ ಸರಿ . ಒಂದು ಬ್ಯಾಂಕ ಎಂದರೆ ಬಾಯಿ ಮಾತಿನ ಮೂಲಕ ನಡೆಯುವಂತದ್ದಲ್ಲ ಎಲ್ಲವೂ ದಾಖಲಾತಿಗಳ ಮೂಲಕ ನಡೆಯುವಂತದ್ದು ಎಂದರೆ ಸರಿ . ಸ್ಪಷ್ಟವಾಗಿ

ಸಾಲದ ಹಣವನ್ನು ನಮೂದಿಸದೇ ಇದ್ದರೆ ಅವರು ಎಷ್ಟು ಸಾಲ ಕೋರಿ ಅರ್ಜಿ ಸಲ್ಲಿಸಿದ್ದಾರೆ ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ಒಂದು ಖಾಲಿ ಹಾಳೆಗೆ ಸಹಿ ಹಾಕಿ ಕೊಟ್ಟರೆ ಅವರು ಎಷ್ಟು ಸಾಲ ಕೋರಿ ಅರ್ಜಿ ಸಲ್ಲಿಸಿದ್ದಾರೆ ನನಗಾಗಲೀ , ನನ್ನ ಬ್ಯಾಂಕಿನವರಿಗಾಗಲೀ ಹೇಳಲು ಆಗುವುದಿಲ್ಲ . ಅಂತಹ ಸಂದರ್ಭದಲ್ಲಿ ಸ್ಪಷ್ಟತೆ ಇಲ್ಲದ ಅರ್ಜಿ ಆರಂಭದಲ್ಲೇ ತಿರಸ್ಕೃತಗೊಳ್ಳುತ್ತದೆ ಎಂದರೆ ಸಾಕ್ಷಿ ಅದು ಕಾರ್ಯನಿರ್ವಾಹಕರಿಗೆ ಗೊತ್ತು ನನಗೆ ಗೊತ್ತಿಲ್ಲ. ಹಿಂದಿನ ಕಾರ್ಯ ನಿರ್ವಾಹಕರು ಪವಿತ್ರಾ ನಾಗರಾಜ ಆಗಿದ್ದರು. ಅವರು ಈಗ ನಮ್ಮ ಬ್ಯಾಂಕಿನಲ್ಲಿ ಕೆಲಸ ನಿರ್ವಹಿಸುತ್ತಿಲ್ಲ . ನಾನು ಅವರನ್ನು ಭೇಟಿಯಾಗಿ ಯಾವ ರೀತಿ ದಾಖಲಾತಿಗಳನ್ನು ನಿರ್ವಹಿಸಿದ್ದೀರಿ ಎಂದು ಕೇಳಿಲ್ಲ ಎಂದರೆ ಸರಿ . ಅವರನ್ನು ಭೇಟಿಯಾಗದೆ ಇರುವ ಕಾರಣ ನಾನು ಯಾವುದೇ ಮಾಹಿತಿ ಇಲ್ಲದೇ ಉತ್ತರ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಲದ ಅರ್ಜಿ ಕೊಟ್ಟು ಅದು ಮಂಜೂರಾದ ನಂತರ ಬೋರ್ಡನವರು ಮಂಜೂರಾದ ಬಗ್ಗೆ ಬರೆದು ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳ ಸಹಿ ಹಾಕುತ್ತಾರೆ ಎಂದರೆ ಸಾಕ್ಷಿ ಆಡಳಿತ ಮಂಡಳಿಯ ಸಭೆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ . ನಿಡಿ-1 ರಲ್ಲಿ ಆಡಳಿತ ಮಂಡಳಿಯವರು ಬೋರ್ಡಿನ ನಿರ್ಣಯ ಬರೆದು ಅಧ್ಯಕ್ಷರ ಹಾಗೂ ಕಾರ್ಯದರ್ಶಿಯವರ ಸಹಿ ಹಾಕಿದ್ದಾರೆ ಎಂದರೆ ಸರಿ . ನಾವು ಹಾಜರು ಪಡಿಸಿದ ಸಾಲದ ಅರ್ಜಿಯಲ್ಲಿ ಸಾಲದ ಮೊತ್ತವಾಗಲೀ , ಸಂಘದ ಹೆಸರಾಗಲೀ , ಬೋರ್ಡಿನ ನಿರ್ಣಯವಾಗಲೀ ಹಾಗೂ ಅಧ್ಯಕ್ಷ್‌ರಾಗಲೀ ಹಾಗೂ ಕಾರ್ಯದರ್ಶಿಗಳ ಸಹಿಯಾಗಲೀ ಇಲ್ಲ ಎಂದರೆ ಸರಿ .

17. ಒಂದು ಸಂಘದಿಂದ ಸಾಲವನ್ನು ಕೋರಿದಾಗ ಆ ಸಂಘದ ಸಭಾ ನಿರ್ಣಯದ ಮಾದರಿಯನ್ನು ಕೊಡಬೇಕಾಗುತ್ತದೆ ಎಂದರೆ ಸರಿ . ಅಂತಹ ದಾಖಲಾತಿಯನ್ನು ಈ ಪ್ರಕರಣದಲ್ಲಿ ನಾವು ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿ ಸಾಲದ ಭದ್ರತೆ ಯಾವಾಗ ಬೇಕಾದರೂ ಚೆಂಜ್ ಆಗಬಹುದು ಎಂದು ನುಡಿದಿರುತ್ತಾರೆ . ಇಲ್ಲಿಯವರೆಗೆ ಸಾಲದ ಭದ್ರತೆಯಲ್ಲಿ ಏನೇನು ಚೆಂಜ್ ಆಗಿದೆ ಗೊತ್ತಿಲ್ಲ . ನಾನು ಇವಾಗ ಬಂದಿರುತ್ತೇನೆ, ಮೊದಲು ಏನೇನು ಚೆಂಜ್ ಆಗಿದೆ ಗೊತ್ತಿಲ್ಲ. ಸ್ಪಷ್ಟವಾಗಿ ಏನೇನು ಬದಲಾವಣೆಗಳಾಗಿವೆ ಗೊತ್ತಿಲ್ಲ. ಒಂದು

ಸಂಘಕ್ಕೆ ಸಾಲ ಬೇಕಾದಾಗ ಅವರ ಸಂಘದಲ್ಲಿ ಒಂದು ಠರಾವಾಗಿರಬೇಕು ಎಂದರೆ ಸರಿಯಲ್ಲ . ಆ ಠರಾವಿನಲ್ಲಿ 1 ನೇ ಪ್ರತಿನಿಧಿ ಯಾರು , 2 ನೇ ಪ್ರತಿನಿಧಿ ಯಾರು , ಹಾಗೂ ಎಷ್ಟು ಸಾಲಕ್ಕೆ ಅರ್ಜಿ ಸಲ್ಲಿಸಬೇಕು ಹಾಗೂ ಯಾವ ಹಣಕಾಸಿನ ಸಂಸ್ಥೆಯಲ್ಲಿ ಸಾಲಕ್ಕೆ ಅರ್ಜಿಯನ್ನು ಸಲ್ಲಿಸಬೇಕು ಎಂಬುದು ಠರಾವಿನಲ್ಲಿ ನಮೂದಾಗಬೇಕು ಎಂದರೆ ಗೊತ್ತಿಲ್ಲ . ನಮ್ಮ ಸಂಘದಲ್ಲಿ ಈ ರೀತಿ ಠರಾವಾಗಿದೆ , ನಮ್ಮ ಸಂಘದಲ್ಲಿ ಠರಾವಿನ ಪ್ರಕಾರ ಪ್ರತಿನಿಧಿ 1 ಇವರು, ಪ್ರತಿನಿಧಿ 2 ಇವರು ಎಂದು ನಮೂದಿಸಿ ಠರಾವನ್ನು ನಮ್ಮ ಬ್ಯಾಂಕಿಗೆ ಕೊಡಬೇಕಾಗುತ್ತದೆ ಎಂದರೆ ಗೊತ್ತಿಲ್ಲ . ಬ್ಯಾಂಕ್ ಸಂಘದಿಂದ ಸಾಲ ಕೋರಿರುವ ಸಭಾ ನಿರ್ಣಯ ಮಾದರಿ ಎಂದು ನಮ್ಮ ಬ್ಯಾಂಕಿನ ಫಾರ್ಮೆಟ್ ಎಂದರೆ ಸರಿ . ಸಾಕ್ಷಿ ಸದರಿ ದಾಖಲಾತಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ -2 ಎಂದು ಗುರುತಿಸಲಾಯಿತು . ಆ ಠರಾವನ್ನು ಇಟ್ಟು ಈ ಫಾರ್ಮೆಟ್ ನಲ್ಲಿ ಇಟ್ಟು ಸಂಘದ ಎಲ್ಲಾ ಸದಸ್ಯರು ಸಹಿ ಹಾಕಿ ಬೇಕಾದ ಸಾಲದ ಮೊತ್ತವನ್ನು ಸ್ಪಷ್ಟವಾಗಿ ನಮೂದಿಸಿ ಪ್ರತಿನಿಧಿ 1 , ಪ್ರತಿನಿಧಿ 2 ಪ್ರತಿನಿಧಿ 3 ರವರು ಸಹಿ ಮಾಡಿ ನಮ್ಮ ಸಂಸ್ಥೆಗೆ ಕೊಡಬೇಕಾಗುತ್ತದೆ ಎಂದರೆ ಗೊತ್ತಿಲ್ಲ. ಬೇರೆ ಪ್ರಕರಣದಲ್ಲಿ ನಮ್ಮ ಶಾಖೆಯವರು ಪಡೆದುಕೊಂಡಿರುವ ಸಭಾ ನಿರ್ಣಯದ ಅರ್ಜಿ ಎಂದರೆ ಸರಿ . ಇಂತಹ ಅರ್ಜಿಯನ್ನು ಈ ಸಂಘದವರು ಯಾವತ್ತೂ ನಮಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಸಂಘ ರಚನೆಯಾಗುವ ಸಮಯದಲ್ಲಿ ನಮ್ಮ ಬ್ಯಾಂಕಿನ ಯಾವ ಸಿಬ್ಬಂದಿ ಅಲ್ಲಿಗೆ ಹೋಗಿದ್ದರು ಗೊತ್ತಿಲ್ಲ. ಆ ಸಂದರ್ಭದಲ್ಲಿ ನಿಮ್ಮ ಸಿಬ್ಬಂದಿಗಳು ಯಾವ ಯಾವ ದಾಖಲಾತಿಗಳನ್ನು ಪಡೆದುಕೊಂಡಿದ್ದಾರೆ ಎಂದರೆ ಸಾಕ್ಷಿ ಕೆವಾಯ್ ಸಿ ದಾಖಲಾತಿಗಳನ್ನು ಪಡೆದಿದ್ದಾರೆ ಎಂದು ನುಡಿದಿರುತ್ತಾರೆ . ಆಧಾರ ಕಾರ್ಡ ಹಾಗೂ ಪೋಟೋ ಪಡೆದಿದ್ದಾರೆ . ಆ ಸಂದರ್ಭದಲ್ಲಿ ಭೇಟಿ ಮಾಡಿದ ನಮ್ಮ ಬ್ಯಾಂಕಿನವರು ಸಾಲಕ್ಕೆ ಆಧಾರವಾಗಿ ನಿಮ್ಮ ಚೆಕ್ ಗಳನ್ನು ನೀಡಬೇಕು ಎಂದು ಹೇಳಿದ್ದರು ಎಂದರೆ ಸರಿಯಲ್ಲ. ನಿಮ್ಮ ಬಳಿ ಇರುವ ಚೆಕ್ ಗಳನ್ನು ತಗೆದುಕೊಂಡು ಬಂದರೆ ಸಾಲ ಮಂಜೂರು ಮಾಡಬಹುದೋ ಇಲ್ಲವೋ ತಿಳಿಸುತ್ತೇವೆ ಎಂದು ನಮ್ಮ ಸಿಬ್ಬಂದಿ ಹೇಳಿದ್ದರು ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ಅವರ ಸಂಘ ಪ್ರಾರಂಭವಾಗುವ ಮೊದಲೇ ಅವರ ಬಳಿ ಇರುವ ಚೆಕ್ ಪುಸ್ತಕ ಹಾಗೂ ಆಧಾರ ಕಾರ್ಡಗಳನ್ನು ತಂದು ತೋರಿಸಿದ್ದಾರೆ ಎಂದರೆ

ಸರಿಯಲ್ಲ. ಆ ಸಂದರ್ಭದಲ್ಲಿ ನಮ್ಮ ಸಿಬ್ಬಂದಿಗಳು ಆರೋಪಿಗಳ ಅರಿವೆಗೆ ಬರದಂತೆ ಎರಡು ಚೆಕ್ ಗಳನ್ನು ತೆಗೆದು ಇಟ್ಟುಕೊಂಡಿದ್ದರು ಎಂದರೆ ಸರಿಯಲ್ಲ . ಆರೋಪಿಗಳು ಬೇರೆ ಬೇರೆ ಸಂಘದಲ್ಲಿ ವಿಚಾರಿಸಿದಾಗ ನಮ್ಮ ಸಂಘದಲ್ಲಿ ಬೇರೆ ಬೇರೆ ವೆಚ್ಚಗಳನ್ನು ಹಾಗೂ ಹೆಚ್ಚಿನ ಬಡ್ಡಿಯನ್ನು ಆಕರಣೆ ಮಾಡುತ್ತೇವೆ ಎಂದು ತಿಳಿದು ಬಂದಿದ್ದರಿಂದಅವರು ನಮ್ಮ ಸಂಸ್ಥೆಯಿಂದ ಸಾಲ ಪಡೆಯುವುದು ಬೇಡಾ ಎಂದು ನಿರ್ಣಯಿಸಿದರು ಎಂದರೆ ಸರಿಯಲ್ಲ. ಅದರ ನಂತರ ಅವರು ಆ ಸಂಘವನ್ನು ಅಸ್ತಿತ್ವಕ್ಕೆ ತಂದಿದ್ದೇ ಇಲ್ಲ ಎಂದರೆ ಸರಿಯಲ್ಲ . ಹಾಗಾಗಿ ಅವರು ನಮ್ಮ ಬ್ಯಾಂಕಿನಲ್ಲಿ ಯಾವುದೇ ಉಳಿತಾಯ ಖಾತೆಯನ್ನು ತೆಗೆದಿಲ್ಲ ಎಂದರೆ ಸರಿಯಲ್ಲ . ನಮ್ಮ ಬ್ಯಾಂಕಿನವರು ಅವರ ಸಂಘಕ್ಕೆ ಹೋದಾಗ ನೀವು ಇಂತಿಂತಹ ದಾಖಲಾತಿಗಳಿಗೆ ಸಹಿ ಹಾಕಬೇಕು ಎಂದು ಒಂದು ಹಾಳೆಯಲ್ಲಿ ಅವರ ಸಹಿಗಳನ್ನು ಪಡೆದಿದ್ದಾರೆ ಎಂದರೆ ಸರಿಯಲ್ಲ . ಈ ಹಾಜರು ಪಡಿಸಿದ ಯಾವುದೇ ದಾಖಲಾತಿಗಳಲ್ಲಿ ಅವರು ಸಹಿ ಮಾಡಿಲ್ಲ ಎಂದರೆ ಸರಿಯಲ್ಲ . ಸಂಘ ರಚಿಸುವ ಪೂರ್ವದಲ್ಲಿ ಹೋದಂತಹ ಸಂದರ್ಭದಲ್ಲಿ ಪಡೆದುಕೊಂಡಂತಹ ಆಧಾರ ಕಾರ್ಡನ್ನು ಇಟ್ಟುಕೊಂಡು ಹಾಗೂ ಅವರ ಗಮನಕ್ಕೆ ಬರದಂತಹ ತೆಗೆದಿಟ್ಟುಕೊಂಡ ಚೆಕ್ ನ್ನು ಬಳಸಿಕೊಂಡು ಈ ಸುಳ್ಳು ಕೇಸನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಆ ಸಂಘ ಅಸ್ತಿತ್ವಕ್ಕೆ ಬರದೇ ಇರುವ ಕಾರಣ ಯಾವುದೇ ಠರಾವು ಆಗಿರಲಿಲ್ಲ ಎಂದರೆ ಸರಿಯಲ್ಲ. ಒಂದುವೇಳೆ ಆ ರೀತಿ ಠರಾವು ಆಗಿದ್ದರೆ ಆ ದಾಖಲಾತಿ ನಮ್ಮ ಬಳಿ ಇರುತ್ತಿತ್ತು ಹಾಗೂ ನಾವು ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸುತ್ತಿದ್ದೆವು ಎಂದರೆ ಸುಳ್ಳು .

18. ಒಂದು ಸಂಘಕ್ಕೆ ಸಾಲ ನೀಡುವ ಸಂದರ್ಭದಲ್ಲಿ ಸ್ವಸಹಾಯ ಸಂಘದ ಸದಸ್ಯರಿಂದ ಬರೆದುಕೊಡುವ ಆಂತರಿಕ ಒಪ್ಪಂದ ಪತ್ರ ಎಂಬ ದಾಖಲಾತಿ ನಮ್ಮ ಬ್ಯಾಂಕಿನಲ್ಲಿ ಇದೆ ಎಂದರೆ ಸರಿ . ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಇದೇ ಅಂತಹ ಪತ್ರ ಎಂದು ತೋರಿಸಲಾಗಿ ಸಾಕ್ಷಿ ನೋಡಿ ಗುರುತಿಸಿದ್ದು ನಿಡಿ-3 ಎಂದು ಗುರುತಿಸಲಾಯಿತು. ಆಂತರಿಕ ಒಪ್ಪಂದ ಪತ್ರದಲ್ಲಿ ಸ್ಪಷ್ಟವಾಗಿ ಸಂಘದ ಹೆಸರು , ಸಂದಾಯವಾದ ಹಣದ ಬಗ್ಗೆ ನಮೂದು ಮಾಡಬೇಕಾಗುತ್ತದೆ ಎಂದರೆ ಸರಿ . ನಮ್ಮ ಬ್ಯಾಂಕಿನಲ್ಲಿ

ಒಂದುಸಂಘಕೆಕ ಸಾಲವನ್ನು ಕೊಟ್ಟಾಗ on demand promissory note ಎಂದು ಫಾರ್ಮೆಟ್ ಇದೆ ಎಂದರೆ ಸರಿ . on demand promissory note ನಲ್ಲೂ ಎಷ್ಟು ಹಣ ಸಂದಾಯ ಮಾಡಿದ್ದೇವೆ , 1 ರಿಂದ 3 ನೇ ಪ್ರತಿನಿಧಿಗಳ ಸಹಿ ನಮೂದು ಮಾಡಿ ಸಾಕ್ಷಿದಾರರ ಸಮಕ್ಷಮ ಸಹಿ ಮಾಡಿ ದಾಖಲಾತಿಯನ್ನು ಪಡೆದುಕೊಳ್ಳಬೇಕಾಗುತ್ತದೆ ಎಂದರೆ ಸರಿ . ಸಾಕ್ಷಿ ಸದರಿ ದಾಖಲಾತಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ -4 ಎಂದು ಗುರುತಿಸಲಾಯಿತು. ಸಾಲದ ಹಣ ಸಂದಾಯ ಮಾಡುವ ಸಂದರ್ಭದಲ್ಲಿ ಬ್ಯಾಂಕನಿಂದ ಗುಂಪಿಗೆ ಸಾಲ ನೀಡುವ ಸಂದರ್ಭದಲ್ಲಿ ಪಡೆಯುವ ಸಾಲ ಒಪ್ಪಂದ ಅನುಚ್ಛೇದ ಎಂಬ ದಾಖಲಾತಿಯನ್ನು ಪಡೆದುಕೊಳ್ಳುತ್ತೇವೆ ಎಂದು ಸಾಕ್ಷಿಗೆ ದಾಖಲಾತಿಯನ್ನು ತೋರಿಸಲಾಗಿ ನೋಡಿ ಗುರುತಿಸಿದ್ದು ಅದನ್ನು ನಿಡಿ -5 ಎಂದು ಗುರುತಿಸಲಾಯಿತು . ಅದರಲ್ಲಿ ಕೊಟ್ಟಿರುವ ಸಾಲದ ಮೊತ್ತ, ಸಂಘದ ಹೆಸರು ಬರೆಯುತ್ತಾರೆ ಎಂದರೆ ಸರಿ. ಸಂಘಕ್ಕೆ ಸಾಲ ನೀಡುವಾಗ ಸದಸ್ಯವಾರು ಸಾಲದ ಅಗತ್ಯದ ಪ್ರಮಾಣ ಎಂಬ ದಾಖಲಾತಿಯನ್ನು ಪಡೆದುಕೊಳ್ಳುತ್ತೇವೆ . ಆ ದಾಖಲಾತಿಯನ್ನು ಸಾಕ್ಷಿ ನೋಡಿ ಗುರುಸಿದ್ದು ಅದನ್ನು ನಿಡಿ -6 ಎಂದು ಗುರುತಿಸಲಾಯಿತು. ಅದರಲ್ಲಿ ಮೇಲೆ ಗುಂಪಿನ ಹೆಸರು ಹಾಗೂ ವಿಳಾಸನ್ನು ಸ್ಪಷ್ಟವಾಗಿ ಬರೆದು ಆ ಗುಂಪಿನ ಸದಸ್ಯರ ಸಂಖ್ಯೆಯನ್ನು ಬರೆದು ಹಾಗೂ ಸದಸ್ಯರ ಹೆಸರನ್ನು ಸ್ಪಷ್ಟವಾಗಿ ನಮೂದಿಸಿ ಅವರಿಗೆ ಎಷ್ಟು ಸಾಲದ ಅಗತ್ಯವಿದೆ ಎಂಬುದನ್ನು ನಮೂದಿಸಿ, ಅವರ ವಾರ್ಷಕ ಆದಾಯದ ಕಾಲಂನಲ್ಲಿ ಮೊತ್ತವನ್ನು ನಮೂದಿಸಿ , ಒಟ್ಟೂ ವಾರ್ಷಿಕ ವೆಚ್ಚವನ್ನು ನಮೂದಿಸಿ, ವಾರ್ಷಿಕ ನಿವ್ವಳ ಆದಾಯವನ್ನು ನಮೂದಿಸಿ ಅದರ ಮೇಲೆ ಎಲ್ಲ ಸದಸ್ಯರ ಸಹಿಗಳನ್ನು ಪಡೆದುಕೊಳ್ಳಲಾಗುತ್ತದೆ ಎಂದರೆ ಸರಿ . ಈ ದಾಖಲಾತಿಯನ್ನು ಕೂಡ ಸಾಕ್ಷಿದಾರರ ಸಮ್ಮುಖದಲ್ಲಿ ಪಡೆಯಲಾಗುತ್ತದೆ ಎಂದರೆ ಸರಿಯಲ್ಲ. ಇಂತಹ ದಾಖಲಾತಿ ಸಾಕ್ಷಿದಾರರ ಸಮ್ಮುಖದಲ್ಲಿ ಸಹಿ ಪಡೆದಿರುವ ದಾಖಲಾತಿ ಎಂದರೆ ಸರಿ . ಇಂಹ ದಾಖಲಾತಿಯನ್ನು ಈ ಪ್ರಕರಣದಲ್ಲಿ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.

19. ಸ್ವಸಹಾಯ ಸಂಘಗಳಿಗೆ ಸಾಲವನ್ನು ನೀಡುವ ಸಂದರ್ಭದಲ್ಲಿ ಸ್ವಸಹಾಯ ಸಂಘದ ಫಾರ್ಮೆಟ್ ನಲ್ಲಿ ಯಾವ ಸಂಘಕ್ಕೆ ಸಾಲ ಕೊಡುತ್ತಿದ್ದೇವೆ ಹಾಗೂ ಆ ಸಂಘದ ಉಳಿತಾಯ ಖಾತೆ ನಂಬರ ಹಾಗೂ ಸಾಲದ ಖಾತೆ ನಂಬರ ನಮೂದಿಸಿ, ಹಾಗೂ ನಗದು ಖಾತೆಯ ನಂಬರ ಕೂಡ ನಮೂದಿಸಿ , ಅದರಲ್ಲಿ ಮಂಜೂರಾತಿಯ ಶರತ್ತುಗಳನ್ನು ನಮೂದಿಸಿ ಯಾವ ದಿನಾಂಕದಂದು ಮಂಜೂರಾಯಿತು ಹಾಗೂ ಠರಾವು ನಂಬರ , ಅದರ ಕ್ರಮ ಸಂಖ್ಯೆ ನಮೂದಿಸಿ , ಸಾಲವನ್ನು ಹಿಂದಿರುಗಿಸುವ ಅವಧಿಯನ್ನು ನಮೂದಿಸಿ, ಆಕರಿಸಬೇಕಾದ ಬಡ್ಡಿಯ ಬಗ್ಗೆ ನಮೂದಿಸಿ , ಸಾಲವನ್ನು ಸಮಾನ ಎಷ್ಟು ಕಂತುಗಳಲ್ಲಿ ತುಂಬುವುದು ಎಂದು ನಮೂದಿಸಿ , ಸಾಲಗಾರರು ಎಷ್ಟು ಜನ ಇದ್ದಾರೆ ಅವರಿಗೆಲ್ಲಾ ಸ್ಪಷ್ಟವಾಗಿ ಹೇಳಿ ಸಾಕ್ಷಿದಾರರ ಸಮ್ಮುಖದಲ್ಲಿ ಪಡೆದುಕೊಳ್ಳುವ ದಾಖಲಾತಿ ಎಂದು ಸಾಕ್ಷಿಗೆ ದಾಖಲಾತಿಯನ್ನು ತೋರಿಸಲಾಗಿ ಸಾಕ್ಷಿ ನೋಡಿ ಗುರುತಿಸಿದ್ದು ಸದರಿ ದಾಖಲಾತಿಯನ್ನು ನಿಡಿ -7 ಎಂದು ಗುರುತಿಸಲಾಯಿತು . ಸಾಲದ ಹಣ ಮಂಜೂರಾದ ನಂತರ ಉಳಿತಾಯ ಖಾತೆಗೆ ಜಮಾ ಮಾಡಿದಾಗ ಉಳಿತಾಯ ಖಾತೆಯಿಂದ ನಮ್ಮ ಖಾತೆಗೆ ಸಂದಾಯ ಮಾಡಿದಾಗ ರಸೀದಿಗಳನ್ನು ಕೊಡಬೇಕಾಗುತ್ತದೆ ಎಂದರೆ ಸರಿ . ಸಾಕ್ಷಿಗೆ ಜಮಾ ಪಾವತಿ ನಗದು ಹಾಗೂ ಕೊಂಟ್ರಾ ರಸೀದಿಯ ದೃಢಿಕರಣ ದಾಖಲಾತಿಗಳನ್ನು ತೋರಿಸಲಾಗಿ ನೋಡಿ ಗುರುತಿಸಿದ್ದು ಅವುಗಳನ್ನು ನಿಡಿ -8 ಮತ್ತು ನಿಡಿ-9 ಎಂದು ಗುರುತಿಸಲಾಯಿತು. ನಮ್ಮ ಬ್ಯಾಂಕಿನಿಂದ ಸಾಲದ ಖಾತೆಗೆ ಸಾಲದ ಖಾತೆಯಿಂದ ಉಳಿತಾಯ ಖಾತೆಗೆ ವರ್ಗಾವಣೆ ಮಾಡಿದ ಬಗ್ಗೆ , ಉಳಿತಾಯ ಖಾತೆಯಿಂದ ನಮ್ಮ ಕೆಡಿಸಿಸಿ ಬ್ಯಾಂಕಿಗೆ ವರ್ಗಾವಣೆ ಮಾಡಿದ ಬಗ್ಗೆ ಯಾವುದೇ ಇಂತಹ ರಸೀದಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿ ದಾಖಲಾತಿಗಳನ್ನು ನೋಡಬೇಕು ಎಂದು ನುಡಿದಿರುತ್ತಾರೆ . ಅಂತಹ ವರ್ಗಾವಣೆಗಳು ಯಾವುದೇ ಆಗದೇ ಇರುವ ಕಾರಣ ನಾವು ಅಂತಹ ಯಾವುದೇ ದಾಖಲಾತಿಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿಸಾರಿ ಪಾಟೀ ಸವಾಲು ಮಾಡಿದ ನಂತರ ನಾವು ದಾಖಲಿಸಿದ ಪ್ರಕರಣ ಸುಳ್ಳು ಎಂದು ನ್ಯಾಯಾಲಯಕ್ಕೆ ಕಂಡು ಬರುತ್ತದೆ ಎಂದು ನಾವು ಹೊಸ ಹೊಸ ದಾಖಲಾತಿಗಳನ್ನು ಸುಳ್ಳಾಗಿ ಸೃಷ್ಟಿಸಿ ಹಾಜರು ಪಡಿಸುತ್ತಿದ್ದೇವೆ ಎಂದರೆ ಸರಿಯಲ್ಲ .

ನಾವು ಹಾಜರು ಪಡಿಸಿರುವ ಎಲ್ಲಾ ದಾಖಲಾತಿಗಳು ಸುಳ್ಳಾಗಿ ಸೃಷ್ಟಿಸಿ ಹಾಜರು ಪಡಿಸಿದ ದಾಖಲಾತಿಗಳು ಎಂದರೆ ಸರಿಯಲ್ಲ. ಸಾಲದ ಅರ್ಜಿ ಬಂದಾಗ ಒಬ್ಬ ನಿರ್ದೇಶಕರು ಆ ಸಾಲದ ಅರ್ಜಿಯನ್ನು ಶಿಫಾರಸ್ಸು ಮಾಡ ಬೇಕಾಗುತ್ತದೆ ಎಂದರೆ ಗೊತ್ತಿಲ್ಲ . ಸಾಲದ ಅರ್ಜಿಯ ಕೆಳಗೆ ಬೋರ್ಡಿನವರು ಯಾವದು ಶಿಫಾರಸ್ಸು ಮಾಡಿರುತ್ತಾರೆ ಬರೆಯಲಾಗುತ್ತದೆ ಎಂದರೆ ಸರಿ . ಈ ಪ್ರಕರಣದಲ್ಲಿರುವ ಸಾಲದ ಅರ್ಜಿಗೆ ಯಾರು ಶಿಫಾರಸ್ಸು ಮಾಡಿದ್ದಾರೆ ನೆನಪಿಲ್ಲ. ನಮ್ಮ ಬ್ಯಾಂಕಿನಲ್ಲಿ ಈಗ ಯಾರು ಯಾರು ನಿರ್ದೇಶಕರಿದ್ದಾರೆ ಗೊತ್ತು . ಬ್ಯಾಂಕ ಆರಂಭವಾದಾಗಿನಿಂದ ಇಲ್ಲಿಯವರೆಗೆ ಯಾರು ಯಾರು ನಿರ್ದೇಶಕರಾಗಿದ್ದರು ಎಂದರೆ ಸಾಕ್ಷಿ ಶರದ ಗಣಪತಿ ನಾಯ್ಕ , ಗಾನಶ್ರೀ ನಾಯ್ಕ , ಮಹಾದೇವಿ ನಾಯ್ಕ , ಗಣಪತಿ ನಾಯ್ಕ ಆಗಿದ್ದರು ಇಷ್ಟೇ ಜನರ ಹೆಸರು ಗೊತ್ತು . ನಮ್ಮ ಸಹಕಾರಿಯಲ್ಲಿ ಮಿಟಿಂಗ್ ಗಳನ್ನು ಕೈಗೊಂಡು ಅದರಲ್ಲಿ ನಿರ್ಣಯ ಕೈಗೊಳ್ಳುವುದು ಅವರ ಕೆಲಸ ಎಂದರೆ ಗೊತ್ತಿಲ್ಲ. ನಮ್ಮ ಬ್ಯಾಂಕಿನಲ್ಲಿ ಬೈಲಾ ಇದೆ ಎಂದರೆ ಸರಿ . ಆ ಬೈಲಾ ಪ್ರಕಾರ ನಾವು ನಡೆದುಕೊಂಡು ಬರಬೇಕಾಗುತ್ತದೆ ಎಂದರೆ ಸರಿ . ನಿರ್ದೇಶಕರಾದವರು ಸಾಲ ವಸೂಲಾತಿಯಲ್ಲಿ ಹಾಗೂ ಕಾರ್ಯಕಾರಿ ಕೆಲಸದಲ್ಲಿ ಯಾವತ್ತೂ ಭಾಗವಹಿಸುವಂತಿಲ್ಲ ಎಂದರೆ ಗೊತ್ತಿಲ್ಲ , ನಾನು ನಮ್ಮ ಸಹಕಾರಿಯ ಬೈಲಾದ ಬಗ್ಗೆ ತಿಳಿದುಕೊಂಡಿಲ್ಲ .

20. ಸಂಘ ರಚಿಸುವ ಪೂರ್ವದಲ್ಲಿ ಕರೆದಿರುವ ಮಿಟಿಂಗ್ ನಲ್ಲಿ ಭಾಗವಹಿಸಿದ ಸಿಬ್ಬಂದಿ ಒಂದು ಹಾಳೆಯ ಮೇಲೆ ಸಂಘ ರಚಿಸಲು ಬಂದವರಿಂದ ಪಡೆದುಕೊಂಡಿರುವ ದಾಖಲಾತಿಯಲ್ಲಿರುವ ಸಹಿಯನ್ನು ನೋಡಿ ಈ ಚೆಕ್ ನ ಮೇಲೆ ಆ ಸಹಿಯನ್ನು ನಕಲು ಮಾಡಿದ್ದಾರೆ ಎಂದರೆ ಸರಿಯಲ್ಲ. ಚೆಕ್ ನ ಮೇಲಿರುವ ಯಾವುದೇ ಬರವಣಿಗ ಆರೋಪಿತದ್ದಲ್ಲ ಎಂದರೆ ಸರಿಯಲ್ಲ . ಆರೋಪಿಗೆ ಯಾವುದೇ ಇಂಗ್ಲೀಷ ಅಥವಾ ಕನ್ನಡ ಬರವಣಿಗೆ ಸ್ಪಷ್ಟವಾಗಿ ಬರೆಯಲು ಬರುವುದಿಲ್ಲ ಎಂದರ ಹೇಳಲು ಸಾಧ್ಯವಿಲ್ಲ . ಸಂಘ ರಚಿಸುವ ಪೂರ್ವದಲ್ಲಿ ಆದಂತಹ ಮಿಟಿಂಗ್ ನಲ್ಲಿ ಆರೋಪಿಯ ಅರಿವಿಗೆ ಬರದೇ ಪಡೆದುಕೊಂಡಿರುವಂತಹ ಚೆಕ್ ನಲ್ಲಿ ನಮ್ಮ ಸುಳ್ಳು ಪ್ರಕರಣಕ್ಕೆ ಅನುಕೂಲವಾಗುವಂತೆ ಬರವಣಿಗೆ ಮಾಡಿ

ನಗದೀಕರಣಕ್ಕಾಗಿ ಈ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಆರೋಪಿಯ ಗಮನಕ್ಕೆ ನಾವು ಈ ಪ್ರಕರಣವನ್ನು ದಾಖಲಿಸಿರುವುದು ಹಾಗೂ ಚೆಕ್ ನ್ನು ದುರುಪಯೋಗ ಪಡಿಸಿಕೊಂಡಿರುವುದು ಈ ನ್ಯಾಯಾಲಯದಿದ ಸಮನ್ಸ ಹೋದ ನಂತರ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ಆ ನಂತರ ಆರೋಪಿ ನಮ್ಮ ಬ್ಯಾಂಕಿಗೆ ಬಂದು ಯಾಕೆ ನಮ್ಮ ಚೆಕ್ ನ್ನು ಪಡೆದುಕೊಂಡಿದ್ದೀರಿ , ನಮಗೆ ಅರಿವಿಗೆ ಇಲ್ಲದಂತೆ ಯಾವಾಗ ಪಡೆದುಕೊಂಡಿದ್ದೀರಿ ಎಂದು, ಹಾಗೂ ಚೆಕ್ ನ್ನು ದುರುಪಯೋಗ ಪಡಿಸಿಕೊಂಡು ಪ್ರಕರಣವನ್ನು ದಾಖಲಿಸಿದ್ದೀರಿ ಎಂದು ಗಲಾಟೆ ಮಾಡಿದ್ದರು ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ನಾನು ಇರಲಿಲ್ಲ. ಗಲಾಟೆಯಾದ ಬಗ್ಗೆ ನಾನು ಪವಿತ್ರಾ ಆಚಾರಿಯವರಿಗೆ ಯಾಕೆ ಗಲಾಟೆಯಾಗಿತ್ತು ಎಂದು ಕೇಳಿ ತಿಳಿದುಕೊಂಡಿಲ್ಲ. ಪವಿತ್ರಾ ಆಚಾರಿಯ ವಿರುದ್ಧ ಆರೋಪಿ ದೂರು ನೀಡಲು ಹೋಗಿದ್ದಳು ಎಂದರೆ ಸರಿಯಲ್ಲ. ಆಗ ನಮ್ಮ ಬ್ಯಾಂಕಿನ ಅಧ್ಯಕ್ಷರು ಪ್ರಭಾವ ಬೀರಿ ಪ್ರಕರಣ ದಾಖಲಾಗದಂತೆ ನೋಡಿಕೊಂಡರು ಎಂದರೆ ಸರಿಯಲ್ಲ ಹಾಗೂ ಈ ಪ್ರಕರಣವನ್ನು ಮುಂದುವರೆಸುವುದಿಲ್ಲ , ಪ್ರಕರಣವನ್ನು ಹಿಂಪಡೆಯುತ್ತೇವೆ ಎಂದು ಆಶ್ವಾಸನೆಯನ್ನು ನೀಡಿದ್ದರು ಎಂದರೆ ಸರಿಯಲ್ಲ. ಈ ಸಂಘದ ಐದು ಜನರು ನಮ್ಮ ಬ್ಯಾಂಕಿನಲ್ಲಿ ಸದಸ್ಯರಾಗಿದ್ದಾರೆ ಎಂದು ತೋರಿಸಲು ಯಾವುದೇ ದಾಖಲಾತಿಯನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನಮ್ಮ ಬ್ಯಾಂಕಿನಲ್ಲಿ ಯಾರೇ ಸದಸ್ಯರಾದರು ಸದಸತ್ವ ಸಂಖ್ಯೆ ಇರುತ್ತದೆ ಎಂದರೆ ಸರಿ . ಇವರೆಲ್ಲರ ಸದಸ್ಯತ್ವ ಸಂಖ್ಯೆ ನನಗೆ ನೆನಪಿಲ್ಲ . ಯಾವ ದಿನಾಂಕದಂದು ಸದಸ್ಯರಾಗಿರುತ್ತಾರೆ ನೆನಪಿಲ್ಲ. ಇವರು ಯಾವತ್ತೂ ನಮ್ಮ ಬ್ಯಾಂಕಿನ ಸದಸ್ಯತ್ವರಾಗಿರಲಿಲ್ಲ , ಕಾರಣ ನೆನಪಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನಮ್ಮ ಸಂಸ್ಥೆಯವರು ದಾಖಲಿಸಿದ ಸುಳ್ಳು ಪ್ರಕರಣದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನಮಗೆ ಯಾವುದೇ ಕಾನೂನುಬದ್ಧ ಹಣವನ್ನು ಸಂದಾಯ ಮಾಡಬೇಕಾಗಿಲ್ಲ ಎಂದರೆ ಸರಿಯಲ್ಲ. ನಾವು ಆರೋಪಿಗೆ ಯಾವುದೇ ಸಾಲದ ಹಣವನ್ನು ಸಂದಾಯ ಮಾಡಿಲ್ಲ ಎಂದರೆ ಸರಿಯಲ್ಲ. ಸಾಲ ಕೋರಿ ಅರ್ಜಿಯನ್ನು ಅವರು ನಮ್ಮ ಬ್ಯಾಂಕಿಗೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ . ನಾವು ಹಾಜರು

ಪಡಿಸಿದ ಎಲ್ಲಾ ದಾಖಲಾತಿಗಳಲ್ಲಿಯೂ ಕೂಡ ನಾವೇ ಸಹಿಯನ್ನು ನಕಲು ಮಾಡಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.